## ಮನದ ಭಾಷೆಯ 'ಚೆನ್ನುಡಿ'

'ನಾವಾಡುವ ನುಡಿಯೇ ಕನ್ನಡ ನುಡಿ' ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ 'ಚೆನ್ನುಡಿ' ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.

ಮಳೆ ಬಂದಾಗಂತೂ ಆಡು ಮಲ್ಲೇಶ್ವರಕ್ಕೆ ಹೋಗದೇ ಚೆಂದ. ನೀರು ಝುರಿ ಝುರಿಯಾಗಿ ಹರಿದುಬರುತ್ತಿದ್ದು ಆ ನೀರಗೆ ಆಡತಿದ್ವಿ. ಓಣ್ಯಾಗೆ ಇರೋ ಎಲ್ರೂ ಸೇರಿ ಪಿಕ್‌ನಿಕ್ ಅಂತ ಚಂದವಳ್ಳಿಗೆ, ಅಂಕಲಿ ಮಠಕ್ಕೆ ಹೋಗ್ ತಿದ್ವಿ. ಚಂದವಳ್ಳಿ ಗುಹೆಗಂತೂ ಯಾಕಡಿಂದ ಯಾಕಡಕೆ ಹೋಗ್ಬೇಕು ಅನ್ನೋದೇ ಗೊತ್ತಾಗ್ತಾ ಇರಲಿಲ್ಲ. ಮೇಷ್ಟ್ರು ಪಾಠ ಮಾಡುವಾಗ ಅದು ರಾಜರು ರಹಸ್ಯವಾಗಿ ಇರೋಕೆ ಕಟ್ಟಿಸಿಕೊಂಡಿದ್ದರು, ಶಾತವಾಹನರು ಕದಂಬರು ಇಲ್ಲಿ ಆಳ್ವಿಕೆ ನಡೆಸಿದ್ದರು, ಮಯೂರವರ್ಮ ರಾಜ ಇದ್ದ ಅಂದಾಗ ಮಯೂರ ಪಿಚ್ಚರ್ ಮಯೂರಾ ನಾ ಸಾರ್ ಅಂತಿದ್ವಿ ಅಲಾ.

ರ: ಜೋಗಿ ಮಟ್ಟಿಗೆ ನಾವು ಸಣ್ಣರಿದ್ದಾಗ ಬಿಡ್ತಿರಲಿಲ್ಲ. ಈಗೀಗ ಬಿಡ್ತಾರೆ. ಯಾವ್ ಊಟ ತಗಂಡು ಏನ್ ಮಾಡ್ತೀಯ ಅಂತ ಷೆನಾಗಿರತತೆ. ಅಲ್ಲಿ ಮೇಲೆ ವ್ಯೂ ಪಾಯಿಂಟ್ ಹತ್ತಿ ನೋಡಿದ್ರೆ ಇಡೀ ದುರ್ಗ ಕಾಣದು. ಅಲ್ಲಿದ್ದ ನಮ್ ಅಜ್ಜಿ ಮನೆ ಕಾಣದು.

ಗೌರಮ್ಮನ ಹಬ್ಬಕ್ಕೆ ಅಜ್ಜಿ ಊರಿಗೆ ಹೋಗತಿದ್ವಿ. ಸಣ್ ಪುಟ್ಟ ಹೆಣ್ಣುಮಕ್ಕಳು ಸೀರೆ ಉಟ್ಕಂಡು ಎಲ್ಲರ ಹತ್ರ ದುಡ್ಡು ಇಸ್ ಕೊಳ್ಳುತ್ತಾ ಇದ್ವಿ. ಗೌರಮ್ಮನ ಮಕ್ಕಳು ಬಂದ್ರು ಅಂತಿದ್ರು. ಪಂಚಮಿ ಹಬ್ಬಕ್ಕೆ ಅಜ್ಜಿ ಎಷ್ಟು ನಮೂನೆ ಉಂಡೆ ಮಾಡಡು. ತನಿ ಎರದು ಬಾರದೇ ತಡ ತಟ್ಟೆ ಮುಂದಿಕ್ಯಂಡು ಒಂದೊಂದೇ ತಿನ್ನದು. ಎಳ್ಳುಂಡೆ, ತಂಬಿಟ್ಟು, ಹುರಿಟ್ಟು, ಶೇಂಗಾ ಉಂಡೆ, ಅವಲಕ್ಕಿ ಉಂಡೆ, ಹೆಸರುಬೇಳೆ ಉಂಡೆ... ಉಫ್ ಈಗ ಅಜ್ಜಿನೂ ಇಲ್ಲ ಮಾಡರೂ ಇಲ್ಲ.

ಸ: ಆಮೇಲೆ ಆಷಾಢದಾಗೆ ಹೋಳಿಗೆಮ್ಮ ಇರುತಿತ್ತು. ಒಂದೊಂದು ಕಡೆ ಒಂದೊಂದು ಮಂಗಳವಾರ. ಮಳೆ ಬರಲಿ ಅಂತ ಆಚರಣೆ ಮಾಡ್ತಿದ್ರು, ಅವತ್ತು ಒಂದೆರಡು ಹನಿ ಆದರೂ ಉದುರತಾ ಇದ್ವು, ಎಲ್ಲರ ಮನ್ಯಾಗೂ ಬ್ಯಾಳಿಗೆ ಹಾಕತಿದ್ರು. ಹೊಸಾ ಮೊರದಾಗೆ ಹೋಳಿಗೆ, ಅನ್ನೋ, ಕುಡಿಕೆ, ನಾಣ್ಯ, ಬೇವಿನ ಸೊಪ್ಪು ಎಲ್ಲಾ ಎಡೆ ಮಾಡಿಕೊಂಡು ಮಾರಮ್ಮನ ಗುಡಿ ಹತ್ತಿರ ಇಟ್ಟು ಬರ್ತಾ ಇದ್ವಿ. ಅವತ್ತು ರಜ ಮಜ... ಅವತ್ತೂ ಎಲ್ಲರ ಮನ್ಯಾಗೂ ಹೋಳಿಗೆ ಘಮ. ಇದ್ದರು ಇಲ್ಲದರು ಅವರ ಶಕ್ತ್ಯಾನುಸಾರ ಹಬ್ಬ ಮಾಡ್ತಾ ಇದ್ರು. ಬರಗಾಲದ ಊರಿಗೆ ಮಳೆ ಬಂದ್ರೇನೆ ಹಬ್ಬ. ಹಬ್ಬ ಆದ್ ಮರ್ದಿನ ಸ್ಕೂಲಿಗೆ ಹೋಗಬೇಕಂದ್ರೆ ಬೇಜಾರು ಅಲೇನೆ.

ರ: ಹೂಂ. ನಮ್ ದುರ್ಗದಗೆ ಜಾತಿ ಧರ್ಮ ಅಂತ ಅಷ್ಟೇನೂ ಬೇದ ತೋರಲ್ಲ. ಎಲ್ಲರೂ ಒಂದೇ ಅಂತ ಅವರು ಹಬ್ಬಕ್ಕೆ ನಾವು ನಮ್ ಹಬ್ಬಕ್ಕೆ ಅವರೂ ಬಂದು ಹೋಗಿ ಮಾಡ್ತಿದ್ವಿ. ಸಣ್ಣ ಹುಡುಗುರಿಗೆ



ಕಣ್ಣಾಸರ ಆದರೆ ಮಸೀದಿಗೆ ಹೋಗಿ ತಾಯಿತ ಕಟ್ಟಿಸಿಕೊಂಡುಬರತಾ ಇದ್ವಿ. ಈಗ ಮನಿಷರಿಗೆ ಮನಿಷ್ಯರೆ ಬೇಕಾಗಿಲ್ಲ. ಎಲ್ಲರಿಗೂ ಮೊಬೈಲ್. ಮಾತೇ ಬಂಗಾರಾಗೈತೆ. ಯಾರೂ ಯಾರ್ ಮನಿಗು ಹೋಗಾಕುಲ್ಲ. ಮೊದ್ಲು ಸಂಜೆ ಕಡೀಕೆ ಅಮ್ಮಯ್ಯರು ಎಲ್ಲಾ ಮನೆ ಮುಂದೆ ಕುತ್ಕಂಡು ಕಷ್ಟ ಸುಖ ಅಡಿಗೆ ತಿಂಡಿ ಮಾತಾಡಿ ಮನಸ್ ಹಗುರ ಮಾಡ್ ಕ್ಯಮ್ ತಿದ್ರು. ಈಗ ಅವರ ಮನ್ಯಗೆ ಅವರು ಯಾರನ ಬಂದ್ರೆ ಎಷ್ಟು ಹೊತ್ತಿಗೆ ಹೋಗ್ತಾರಪ ಅಂತ ನೋಡ್ತರೆ. ಆಮೇಲೆ ನಾವೂ ಕುಂಟೆ ಬಿಲ್ಲೆ ಆಡೋದು, ಐಸ್ ಪೈಸ್ ಆಡೋದು ಮಾಡ್ತಿದ್ವಿ. ಕರೆಂಟ್ ಹೋದ್ರೆ ಸಾಕು ನಮ್ ಆಟ ಸುರು. ಕಾಂಪೌಂಡ್‌ನಲ್ಲಿದ್ದ ಬೇವಿನ ಮರದ ಕೆಳಗೆ ನಮ್ ಆಟ. ಆ ಮರಕ್ಕೆ ಎಷ್ಟು ಪಕ್ಷಿ ಬರವು. ಗುಬ್ಬಿ ಮಣ್ಣಗೆ ಸ್ನಾನ ಮಾಡಿ ಸುತ್ತೂರ ತಿರುಗಿದ್ರೆ ಅವತ್ತು ಮಳೆ ಬಂದೇ ಬರತತೆ ಅಂತ ತಿಪ್ಪಜ್ಜಿ ಹೇಳತಿದ್ಲು. ಅಂಗೆ ಬರದು ನೋಡು.

ಸ: ಕಾಲ ಬದ್ಲಾಗಿ ಹೋಗೈತೆ. ಮರನೂ ಇಲ್ಲ ಜಾಗವೂ ಇಲ್ಲ. ಅಲ್ಲೇ ಒಂದೆರಡು ಬಿಲ್ಡಿಂಗ್ ಎದ್ದಿವೆ ಆಗ್ಲೇ. ಆವಾಗಂತೂ ಐಸ್ ಕ್ರೀಮ್ ಪಾರ್ಲರ್ ಇಲ್ಲ ಯಾತುದ್ದೂ ಇಲ್ಲ ಐಸ್ ಕ್ಯಾಂಡಿ ಸೈಕಲ್ ಬಂದ್ರೆ ಸಾಕು ಅವನಿಂದೆ ಹೋಗಿ ಐಸ್ ತಗಂಬದು. ದಿಕ್ಕಿಲ್ಲದ್ ತಿಪ್ಪಜ್ಜಿ ರೂಪಾಯಿ ಎಂಟಾಣೆ ಕೂಡಿಕ್ಯಂಡು ಬಡುರ್ ಮಕ್ಳಿಗೆ ಕೊಡಸಳು. ಅಲ್ಲೇ ಒಂದ್ ಗುಡ್ಲು ಹಾಕ್ಯಂಡು ಅಂಗಡಿ ಇಕ್ಯಂಡು ಜೀವನ ಮಾಡದು. ಅವಜ್ಜಿ ಏನ್ ಬಿಟ್ರೂ ನಾಯಕನಹಟ್ಟಿ ಪರಸಿಗೆ ವರ್ಷ ವರ್ಷ ಹೋಗದು ಬಿಡ್ತಿರಲಿಲ್ಲ. ಜಾತ್ರೆ ಬೆಂಡು ಬತ್ತಾಸು, ದವನ ತಂದು ಎಲ್ಲರಿಗೂ ಕೊಡದು. ಸ್ವಾಮಿ ನಮ್ಮಪ್ಪ ಅಂತ ಮುಗೀರಿ ಅಂತ ಮುಗಿಸದು. ಪಾಪ ವೋದರ್ಷ ಅತ್ಲರ್ಷ ತೀರಕ್ಯಂತು. ಮರ್ ಪರಸೆ ಆದ್ ಮೇಲೆ ಉಗಾದಿ. ಹೋಳಿ ಹುಣ್ಣಿಮೆ ದಿನ ಕಣಿವೆ ಮಾರಮ್ಮನ ಹಬ್ಬ. ಅದೂ ಜೋರಾದ ಹಬ್ಬವೇ.

ರ: ಉಗಾದಿಗಂತೂ ಎಷ್ಟ್ ಸಂಭ್ರಮ. ಎಲ್ಲರೂ ಹೊಸ್ ಬಟ್ಟೆ. ಎಣ್ಣೆ ಹಚ್ಚಕ್ಯಂಡ ಗಂಡಸರೂ ತಿಪ್ಪಜ್ಜಿ ಸರ್ಕಲ್ ಅಲ್ಲಿ ಇಲ್ಲಿ ಕುಂತು ಮೀಟಿಂಗ್ ಮಾಡಿ ಬರವತ್ತಿಗೆ ಬೇವು ಬೆಲ್ಲ, ಸ್ಯಾವಿಗೆ ಮಾಡೋರು. ತಿರುಗ್ ದಿನ ಚಂದ್ರನ ನೋಡ ಹಬ್ಬ. ಅವತ್ತು ಹೋಳಿಗೆ. ಈ ಕಡೆ ಆಚರಣೆ ಇಲ್ಲ. ನಾವು ಚಂದ್ರುನ್ನ ನೋಡಿ ದೇವುಸ್ಥಾನುಕ್ಕೆ ಹೋಗಿ ಬಂದು ಹಿರಿಯರಿಗೆ ಅಡ್ ಬಿದ್ದು ಆಶೀರ್ವಾದ ತಗೊಳ್ತಾ ಇದ್ವಿ.

ಸ: ಉಗಾದಿಗೆ ಹೊಸ ಹಪ್ಪಳ ಆಗಬೇಕು ಅಂತ ಶಿವರಾತ್ರಿಗೇನೆ ಹಪ್ಪಳ ಸಂಡಿಗೆ ಮಾಡ್‌ಬಿಡದು ಅಮ್ಮಯ್ಯ. ಆವಾಗ ಹಪ್ಪಳ ಮಾಡೋದು ಒಂದು ಸಂಭ್ರಮ. ಒಬ್ಬರು ಮನೆಗೆ ಹಪ್ಪಳ ಮಾಡ್ತರೆ ಅಂದ್ರೆ ಬೀದ್ಯಗೆ ಇರೋ ಮನೆಗಳೆಲ್ಲರೂ ಹಪ್ಪಳ ವೃತ್ತಕ್ಕೆ ಹೋಗ್ತಿದ್ರು. ಅದು ಮುಗಿದ ಮೇಲೆ ಇನ್ನೊಬ್ಬರದು. ಇವಾಗ ಅಂಗಿಲ್ಲಮ್ಮ. ಹಪ್ಪಳ ಮನ್ಯಗೆ ಮಾಡುದ್ರೆ ತಾನೇ. ಜನ ಬಾವ್ರುಣಿಕೆನೇ



ಮುರುಘಾವನ